**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1947/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಶ್ರೀಮತಿ ಅನ್ನಪೂರ್ಣ ಕುಬ್ಬಿಹಾಳಮಠ್ | ಪ್ರಾಸಾ-2 |
| ಗಂಡನ ಹೆಸರು | : ಚಿದಾನಂದಯ್ಯ | ಚಾಸಾ-4 |
| ವಯಸ್ಸು | : 33 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ04.06.2024. |
| ವಾಸಸ್ಥಳ | : ಜಾಲಹಳ್ಳಿ, ಬೆಂಗಳೂರು. | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಮೃತ ನಿರಂಜನ್ ಹಿರೇಮಠ್ ನನ್ನ ಗಂಡನ ತಂಗಿ ಮಗ. ಮೃತ ಪೂಜಾ ಹಿರೇಮಠ್ ನನ್ನ ಗಂಡನ ತಂಗಿ. ಚಾಸಾ-1 ರವರು ಸದರಿರವರ ಪತಿ.

ದಿ.12.08.2023 ರಂದು ಮ.2.30 ರ ಸಮಯಕ್ಕೆ ಚಾಸಾ-2 ರವರು ನನ್ನ ಗಂಡನ ಮೊಬೈಲ್ ಗೆ ದೂರವಾಣಿ ಕರೆ ಮಾಡಿದ್ದು ಅದನ್ನು ನಾನು ಸ್ವೀಕರಿಸಿರುತ್ತೇನೆ. ದೂರವಾಣಿಯಲ್ಲಿ ಮೂಡಿಗೆರೆಯಲ್ಲಿ ಅಪಘಾತವಾಗಿದ್ದು ಅವರು ನಿಮ್ಮ ಕಡೆಯವರ ಎಂದು ಹೇಳಿ ವಾಟ್ಸಪ್ ನಲ್ಲಿ ಚಾಸಾ-1 ಮತ್ತು ಮೃತ ಪೂಜಾ ರವರ ಆಧಾರ್ ಕಾರ್ಡ್ ಫೋಟೋಗಳನ್ನು ಕಳುಹಿಸಿದರು. ನಂತರ ಚಾಸಾ-2 ರವರಿಗೆ ಅವರು ನಮ್ಮ ಕಡೆಯವರೇ ಎಂದು ಹೇಳಿದಾಗ ಚಾಸಾ-1 ರವರಿಗೆ ತಲೆಗೆ ಏಟಾಗಿದ್ದು ಅವರನ್ನು ಆಸ್ಪತ್ರೆಗೆ ಕಳುಹಿಸುವುದಾಗಿ ಹಾಗೂ ಅವರ ಪತ್ನಿ ಮತ್ತು ಮಗನಿಗೆ ಉಸಿರು ಇಲ್ಲ ಎಂದು ತಿಳಿಸಿದ್ದರು. ನಂತರ ನಾವು ಬೆಂಗಳೂರಿನಿಂದ ಸ.4.00 ಗಂಟೆಗೆ ಹೊರಟು ಮೂಡಿಗೆರೆ ಪೋಲಸ್ ಠಾಣೆಗೆ ರಾ.8.30 ರ ಸಮಯಕ್ಕೆ ತಲುಪಿದೆವು. ನಂತರ ಪೋಲಿಸರು ನನ್ನನ್ನು ಶವಗಳನ್ನು ಗುರುತಿಸುವ ಸಲುವಾಗಿ ಎಂ.ಜಿ.ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪೂಜಾ ಹಿರೇಮಠ್ ಹಾಗೂ ನಿರಂಜನ್ ಹಿರೇಮಠ್ ರವರ ಮೃತ ದೇಹವನ್ನು ತೋರಿಸಿದರು ಆಗ ನಾವು ಅವರನ್ನು ಗುರುತಿಸಿದೆವು.

ನಂತರ ಮೃತ ಪೂಜಾ ಹಿರೇಮಠ್ ರವರ ಶವದ ಪೋಸ್ಟ್ ಮಾರ್ಟಮ್ ಎಂದು ವೈದ್ಯರು ಹಾಜರಾಗಿ ಅವರಿಗೆ ಆದ ಗಾಯಗಳನ್ನು ನನಗೆ ತೋರಿಸಿದರು. ಸಾಕ್ಷಿಯು ದಿ.12.08.2023 ರ ಶವತನಿಖಾ ವರದಿಯಲ್ಲಿ ತಮ್ಮ ಸಹಿಯನ್ನು ಗುರುತಿಸಿ, ಭಾವಚಿತ್ರದಲ್ಲಿ ತಾವು ಇರುವುದಾಗಿ ಹಾಗೂ ಮತ್ತೊಂದು ಭಾವಚಿತ್ರದಲ್ಲಿ ಮೃತ ಪೂಜಾ ಹಿರೇಮಠ್ ರವರನ್ನು ಗುರುತಿಸುತ್ತಾರೆ. ಶವತನಿಖಾ ವರದಿಯನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ), ಭಾವಚಿತ್ರಗಳನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು. ನಿಪಿ-5 ಕ್ಕೆ ಸಹಿ ಮಾಡುವಾಗ ರಾ.10.30 ಆಗಿದ್ದು ಚಾಸಾ-2 ಮತ್ತು 13 ರವರು ಸಹಿ ಮಾಡಿದ್ದಾರೆ.

**<u>ಪಾಟೀ ಸವಾಲು:ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ</u>**

ನಿಪಿ-5 ನ್ನು ಪೋಲಿಸರು ಬರೆದಿದ್ದಾರೆ. ನಾನು ಸಹಿ ಮಾಡುವ ಕಾಲಕ್ಕೆ ನಿಪಿ-5 ರಲ್ಲಿ ಏನು ಬರೆದಿತ್ತು ಎಂದು ನಾನು ಓದಿ ನೋಡಿದ್ದೇನೆ. ನಿಪಿ-5 ರಲ್ಲಿ KSRTC ಬಸ್ ಮತ್ತು ಕಾರಿನ ನೋಂದಣಿ ಸಂಖ್ಯೆಗಳನ್ನು ನಮೂದು ಮಾಡಿದ್ದು ಅವುಗಳನ್ನು ಈಗ ಹೇಳಲು ನೆನಪಿಲ್ಲ. ನಾನು ಸಹಿ ಮಾಡುವಾಗ 1½ ಪೇಜಿನಷ್ಟು ಬರವಣಿಗೆ ಇದ್ದು ಆ ದಾಖಲೆ ಒಟ್ಟು ಎಷ್ಟು ಪುಟದಾಗಿತ್ತು ಎಂದು ನನಗೆ ನೆನಪಿಲ್ಲ. ನಿಪಿ-5 ಕ್ಕೆ ನಾನು ಪೋಲಿಸರ ಕೋರಿಕೆಯಂತೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ನ್ನು ಪೋಲಿಸರು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿಕೊಂಡು ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಯಾವ ದೂರವಾಣಿ ಸಂಖ್ಯೆಯಿಂದ ಕರೆ ಬಂದಿತ್ತು ಎಂದು ಈಗ ಹೇಳಲು ಆಗುವುದಿಲ್ಲ ಆದರೆ ಅದು ನನ್ನ ಮೊಬೈಲ್ ನಲ್ಲಿ ಸ್ಟೋರ್ ಆಗಿದೆ.

ಅಪಘಾತದ ಸಂಬಂಧ ವಿಮಾ ಪರಿಹಾರ ಕೋರಿ ಅರ್ಜಿ ಸಲ್ಲಿಸಲಾಗಿದೆ ಎಂದರೆ ಸರಿ. ಸದರಿ ಅರ್ಜಿಗೆ ಸಹಾಯವಾಗುವಂತೆ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಪ್ರಕರಣಕ್ಕೂ ನನ್ನ ಸಾಕ್ಷ್ಯಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1947/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಶಿವಯೋಗಯ್ಯ ಹಿರೇಮಠ್. | ಫ್ರಾಸಾ-1 |
| ತಂದೆಯ ಹೆಸರು | : ಗಂಗಯ್ಯ ಹಿರೇಮಠ್ | ಚಾಸಾ-1 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಡಿಜಿಎಂ. ರಿಲಾಯನ್ಸ | ದಿನಾಂಕಃ04.06.2024. |
| ವಾಸಸ್ಥಳ | : ಕೋಣನಕುಂಟೆ ಕ್ರಾಸ್, ಬೆಂಗಳೂರು. | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ಮೃತ ನಿರಂಜನ್ ಹಿರೇಮಠ್ ನನ್ನ ಮಗ ಹಾಗೂ ಮೃತ ಪೂಜಾ ಹಿರೇಮಠ್ ನನ್ನ ಪತ್ನಿ.

ದಿ.12.08.2023 ರಂದು ಕಾರ್ಕಳದ ಬಾಲಾಜಿ INC ನಿಂದ ಬೆಂಗಳೂರಿಗೆ ಹೋಗಲು ಬೆಳಗ್ಗೆ ಸುಮಾರು 10.00 ರಿಂದ 10.30 ರ ಸಮಯಕ್ಕೆ ನನ್ನ ಮಾರುತಿ ಸ್ವಿಫ್ಟ್ ಕಾರು ಸಂ.KA-05-NE-9872 ಕಾರ್ ನಲ್ಲಿ ನಾನು, ನನ್ನ ಪತ್ನಿ ಮತ್ತು ನನ್ನ ಮಗ ನಿರಂಜನ್ ಹಿರೇಮಠ್ ಹೊರಟು ಮೂಡಿಗೆರೆಯ ಒಂದು ಕಾಫೀಕ್ಯೂರಿಂಗ್ ಬಳಿ ಬರುವಾಗ ನಾನು ರಸ್ತೆಯ ಎಡಬದಿಯಲ್ಲಿ ಇದ್ದೆ ಆಗ ಎದುರಿನಿಂದ ಸರ್ಕಾರಿ ಬಸ್ ಸಂ.KA-04-F-0506 ರ ಚಾಲಕ ಅತೀವೇಗ, ಅಜಾಗರುಕತೆ ಮತ್ತು ನಿರ್ಲಕ್ಷ್ಯತನದಿಂದ ಓವರ್ ಟೇಕ್ ಮಾಡಿಕೊಂಡು ಬಂದು ನಮ್ಮ ಕಾರಿಗೆ ಡಿಕ್ಕಿಪಡಿಸಿರುತ್ತಾರೆ. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರದ ಕಾರಣ ಏನಾಯಿತು ಎಂದು ನನಗೆ ತಿಳಿದಿಲ್ಲ. ನಂತರ ಆಂಬುಲೆನ್ಸ್ ಬಂದಾಗ ನಾನು ನನ್ನ ಮಗ ಮತ್ತು ಪತ್ನಿಯನ್ನು ನೋಡಿದ್ದು ನನ್ನ ಮಗನ ಎಡಭಾಗ ತಲೆ ಮತ್ತು ಶರೀರದ ಮೇಲೆ ರಕ್ತ ಒಣಗಿತ್ತು. ನನ್ನ ಪತ್ನಿಯ ತಲೆ ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು. ನಂತರ ನನ್ನನ್ನು ಮತ್ತು ನನ್ನ ಪತ್ನಿಯನ್ನು ಒಂದೇ ಆಂಬುಲೆನ್ಸ್ ನಲ್ಲಿ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಪಘಾತದಿಂದ ನನ್ನ ಬಾಯಿ, ತಲೆ, ಹಣೆ, ಗದ್ದ, ಎದೆ ಮತ್ತು ಬೆನ್ನಿಗೆ ತೀವ್ರ ಗಾಯವಾಗಿ ರಕ್ತ ಸುರಿಯುತ್ತಿತ್ತು.

ನಂತರ ನಾನು ಆಸ್ಪತ್ರೆಯಲ್ಲಿ ಇರುವಾಗ ನನ್ನ ಪತ್ನಿ ಹಾಗೂ ಮಗ ಮೃತರಾಗಿದ್ದಾರೆ ಎಂದು ತಿಳಿದುಬಂತು. ತಕ್ಷಣ ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ಕಳುಹಿಸಿದರು. ನಾನು ಮೂಡಿಗೆರೆ ಆಸ್ಪತ್ರೆಯಲ್ಲಿ ಇದ್ದಾಗ ಮೂಡಿಗೆರೆ ಪೋಲಿಸರು ಬಂದು ನನ್ನ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ನಂತರ ಮಂಗಳೂರಿನಿಂದ ಹುಬ್ಬಳ್ಳಿಗೆ ಹೋಗಿ ಕೆಎಲ್ಇ ಆಸ್ಪತ್ರೆಯಲ್ಲಿ 8 ದಿನ ಚಿಕಿತ್ಸೆ ಪಡೆದುಕೊಂಡಿದ್ದು ಇಲ್ಲಿಯವರೆಗೂ ಚಿಕಿತ್ಸೆ ಪಡೆಯುತ್ತಲೇ ಇರುತ್ತೇನೆ. ನಂತರ ದಿ.18.10.2023 ರಂದು ಪೋಲಿಸರು ನನ್ನನ್ನು ಮುಂದುವರೆದ ವಿಚಾರಣೆ ಮಾಡಿರುತ್ತಾರೆ.

ಸಾಕ್ಷಿಯು ದಿ.12.08.2023 ರ ಹೇಳಿಕೆಯಲ್ಲಿ ತಮ್ಮ ಸಹಿಯನ್ನು ಗುರುತಿಸುತ್ತಾರೆ. ಸಾಕ್ಷಿಯು

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ತಮಗೆ ಅಪಘಾತಪಡಿಸಿದ ಬಸ್ ನ್ನು ಅವರೇ ಚಾಲನೆ ಮಾಡುತ್ತಿದ್ದರು ಎಂದು ಗುರುತಿಸುತ್ತಾರೆ. ಸಾಕ್ಷಿಯು ಮುಂದುವರೆದು ಎರಡು ಭಾವಚಿತ್ರಗಳನ್ನು ನೋಡಿ ತಮಗೆ ಅಪಘಾತಪಡಿಸಿದ ಬಸ್ ಹಾಗೂ ತಾವು ಚಾಲನೆ ಮಾಡುತ್ತಿದ್ದ ಕಾರನ್ನು ಗುರುತಿಸುತ್ತಾರೆ. ದಿ.12.08.2023 ರ ಹೇಳಿಕೆಯನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಎರಡು ಭಾವಚಿತ್ರಗಳನ್ನು ಸಿಡಿಯೊಂದಿಗೆ ನಿಪಿ-2 ರಿಂದ 4 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ</u>**

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಅದರಲ್ಲಿ ಕಾಣುವ ಕಾರು ತಮ್ಮದೇ ಎಂದು ಸೂಚಿಸಿದರೆ ಸಾಕ್ಷಿಯು ಹೌದು ಎಂದು ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ ಅಪಘಾತವಾದ ಸ್ಥಳ ಅದೇಯಾ ಎಂದು ಕೇಳಿದರೆ ಸಾಕ್ಷಿಯು ತನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿ.13.08.2023 ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಿಸಿರುವ ಪ್ರಕಟಣೆಯನ್ನು ತೋರಿಸಿ ಓದಿ ಹೇಳಿ ಆ ಪ್ರಕಟಣೆ ತಮಗೆ ಆದ ಅಪಘಾತದ ಬಗ್ಗೆ ಪ್ರಕಟಣೆಯಾದ ವಾರ್ತೆ ಎಂದರೆ ಸಾಕ್ಷಿಯು ಅದರಲ್ಲಿ ನಮೂದಿಸಿರುವ ವಯಸ್ಸಿನಲ್ಲಿ ವ್ಯತ್ಯಾಸ ಇರುವುದನ್ನು ಹೊರತುಪಡಿಸಿ ಉಳಿದ ವಿಷಯಗಳನ್ನು ಹೌದು ಎಂದು ಒಪ್ಪಿ ಭಾವಚಿತ್ರದಲ್ಲಿ ಕಾಣುತ್ತಿರುವ ಕಾರು ಅಪಘಾತಪಡಿಸಿದ ಬಸ್ ಎಳೆದುಕೊಂಡು ಬಂದು ಆ ಸ್ಥಳಕ್ಕೆ ಬಿದ್ದಿದೆ ಎಂದು ನುಡಿಯುತ್ತಾರೆ. ಸದರಿ ಪ್ರಕಟಣೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರ ತೋರಿಸಿ ಅದರಲ್ಲಿ ಕಾಣುವ ಬಸ್ ತಮಗೆ ಅಪಘಾತ ಪಡಿಸಿದ ಬಸ್ ಎಂದು ಸೂಚಿಸಿದರೆ ಸಾಕ್ಷಿಯು ಅದರಲ್ಲಿ ಬಸ್ ನ ಹಿಂಬದಿ ಕಾಣುತ್ತಿರುವ ಕಾರಣ ತಮಗೆ ಗುರುತಿಸಲು ಆಗುತ್ತಿಲ್ಲ ಎಂದು ನುಡಿಯುತ್ತಾರೆ.

ನಿಡಿ-1 ರಲ್ಲಿ ಕಾಣವ ಬಸ್ ರಸ್ತೆಯ ಪಕ್ಕದ ಮಣ್ಣಿನ ರಸ್ತೆಯ ಮೇಲೆ ಇದೆ ಎಂದು ಸೂಚಿಸಿದರೆ ಸಾಕ್ಷಿಯು ತಮಗೆ ಅಪಘಾತ ಪಡಿಸಿದ ನಂತರ ಬಸ್ ನ್ನು ಆ ಸ್ಥಳಕ್ಕೆ ನಿಲ್ಲಿಸಲಾಗಿದೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ಕಾಣುವ ಬಸ್ ನ ಎಡಭಾಗದಲ್ಲಿ ಜಖಂ ಆಗಿದ ಎಂದರೆ ಸಾಕ್ಷಿಯು ಮಧ್ಯಭಾಗ ಮತ್ತು ಎಡಭಾಗದಲ್ಲಿ ಜಖಂ ಆಗಿದೆ ಎಂದು ನುಡಿಯುತ್ತಾರೆ. ನಾನು ಕಾರ್ಕಳದಿಂದ ಅಪಘಾತವಾದ ಸ್ಥಳಕ್ಕೆ ಸಮಾರು 3.00 ರಿಂದ 3.30 ಗಂಟೆಗಳ ಸಮಯ ಅವಧಿಯಲ್ಲಿ ತಲುಪಿರುತ್ತೇನೆ. ಆ ಸಮಯದಲ್ಲಿ ಮಳೆ ಬರುತ್ತಿರಲಿಲ್ಲ. ಅಪಘಾತವಾದ ಸಮಯಕ್ಕೆ ನಾನು ಆರೋಗ್ಯವಾಗಿಯೇ ಇದ್ದೆ. ಆ ದಿನ ನಾನೇ ನನ್ನ ಕಾರನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣ ಎದುರಿನಿಂದ ಬರುತ್ತಿದ್ದ KSRTC ಬಸ್ ನ ಚಾಲಕ ತುಂಬ ದೂರದಿಂದ ಬ್ರೇಕ್ ನ್ನು

ಅಳವಡಿಸಿದ್ದರು ಎಂದರೆ ಸರಿಯಲ್ಲ. ಬಸ್ ಬರುತ್ತಿದ್ದ ಮಾರ್ಗದಲ್ಲಿ ತಿರುವು ಮತ್ತು ಹಂಪ್ಸ್ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳಕ್ಕೆ ನಾನು ಹೋಗುತ್ತಿದ್ದ ಮಾರ್ಗ ನೇರವಾಗಿ ಇತ್ತು. ಆ ರೀತಿ ರಸ್ತೆ ನೇರವಾಗಿದ್ದ ಕಾರಣ ನನ್ನ ಕಾರನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದೆ ಎಂದರೆ ಸರಿಯಲ್ಲ.

ನಾನು ವಿಮಾ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಅರ್ಜಿಗೆ ಸಹಾಯವಾಗಲಿ ಎಂದು ಈ ಪ್ರಕರಣದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಹನ ಚಾಲನೆ ಮಾಡುವಾಗ ನಮ್ಮ ಕಾರಿನ ಎದುರು ಯಾವುದೇ ವಾಹನ ಸಂಚರಿಸುತ್ತಿರಲಿಲ್ಲ. ನಾನು ಬಸ್ಸಿನ ಚಾಲಕನನ್ನು ಡಿಕ್ಕಿಪಡಿಸುವ ಮುಂಚೆಯೇ ನೋಡಿದ್ದೆ ಆದರೆ ಎಷ್ಟು ಅಂತರ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಕಾರು ಚಾಲನೆ ಮಾಡುವಾಗ ರಸ್ತೆಯ ಮೇಲೆ ನಿಗಾ ಇರದೆ ಎದುರು ಬರುತ್ತಿದ್ದ ಬಸ್ಸಿನ ಮೇಲೆ ನಿಗಾ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಚಾಲನೆಯ ಮೇಲೆ ನಿಗಾ ಇಡದೇ ಬಸ್ಸಿಗೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ರಸ್ತೆಯ ಅಗಲ ಎಷ್ಟಿತ್ತು ಎಂದು ಹೇಳಲಾಗುವುದಿಲ್ಲ ಆದರೆ ಅದು ಕೇವಲ ಒಂದು ವಾಹನ ಹೋಗುವಷ್ಟು ವಿಸ್ತೀರ್ಣ ಇತ್ತು. ಅಪಘಾತವಾದ ಸ್ಥಳದ ಎಡಬದಿಯಲ್ಲಿ ಮರ ಇತ್ತು. ಆ ಮರ ಅಪಘಾತವಾದ ಸ್ದಳದಿಂದ ಎಷ್ಟು ವಿಸ್ತೀರ್ಣದ ದೂರದಲ್ಲಿ ಇತ್ತು ಎಂದು ನನ್ನಿಂದ ಹೇಳಲು ಆಗುವುದಿಲ್ಲ.

ಅಪಘಾತದಿಂದ ನಮ್ಮ ಕಾರಿನ ಮುಂಭಾಗ ಮತ್ತು ಎಡಭಾಗಕ್ಕೆ ಜಖಂ ಆಗಿದೆ. ನಿಪಿ-1 ನ್ನು ನಾನು ಹೇಳಿರುವಂತೆ ಮೂಡಿಗೆರೆ ಪೋಲಿಸರು ಬರವಣಿಗೆ ಮಾಡಿ ನನಗೆ ಓದಿ ಹೇಳಿದ್ದಾರೆ. ನಿಪಿ-1 ರಲ್ಲಿ ಜನ್ನಾಪುರದ ಕಡೆಯಿಂದ ಬಸ್ ಬರುತಿತ್ತು ಎಂದು ಹೇಳಿರುವ ಸಂಬಂಧ ಆ ಹೇಳಿಕೆಯನ್ನು ರಸ್ತೆಬದಿಯ ಬೋರ್ಡ್ ನೋಡಿ ನಾನು ಹೇಳಿರಬಹುದು. ನಾನು ಅಪಘಾತವಾಗುವ ಮುನ್ನ ಹಾಗೂ ಅಪಘಾತವಾದ ನಂತರ ಸ್ಥಳದಲ್ಲಿ ಎಚ್ಚರವಾದ ಮೇಲೆ ಬಸ್ ನ ನೋಂದಣಿ ಸಂಖ್ಯೆ ನೋಡಿದ್ದೆ. ನನ್ನನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಸಂಜೆಯಾಗಿದ್ದು ಸಮಯ ಗೊತ್ತಿಲ್ಲ. ನಿಪಿ-1 ನ್ನು ಮ.3.00 ರಿಂದ 4.00 ರವರೆಗೂ ಬರೆದಿರಬಹುದು. ನಿಪಿ-1 ನ್ನು ನಾನು ಮತ್ತು ಪೋಲಿಸರು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ನುಡಿಸಾಕ್ಷ್ಯ ಸತ್ಯಕ್ಕೆ ದೂರವಾದದ್ದು ಎಂದರೆ ಸರಿಯಲ್ಲ. ವಿಮಾ ಪರಿಹಾರಕ್ಕೆ ಸಲ್ಲಿಸಿರುವ ಅರ್ಜಿಗೆ ಸಹಾಯವಾಗಲಿ ಎಂದು ನನ್ನ ಮುಂದುವರೆದ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದುವರೆದ ಹೇಳಿಕೆಯನ್ನು ಪೋಲಿಸರು ದೂರವಾಣಿ ಮೂಲಕ ದಾಖಲಿಸಿಕೊಂಡಿದ್ದು ಪೋಲಿಸ್ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ನಾನು ಹೇಳಿರುವಂತೆ ಯಾವುದೇ ಮುಂದುವರೆದ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಈ ದಿನ ಗುರುತಿಸಿರುವ ದಾಖಲೆಗಳನ್ನು

ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.